ಶುರುವಾಯಿತು. ನನ್ನ ಒಡನಾಟ, ವ್ಯವಹಾರ ಮಕ್ಕಳ ಜೊತೆ. ಅವರ ಬಾಲ್ಯ ಮಧುರ, ಸಮೃದ್ಧ, ಶ್ರೀಮಂತಗೊಳಿಸುವುದು ಅಧ್ಯಾಪಕನಾಗಿ ನನ್ನ ಹೊಣೆಗಾರಿಕೆ ಎಂಬ ನಂಬಿಕೆಯಿಂದ ಮಕ್ಕಳ ಸಾಹಿತ್ಯ ಪ್ರಕಾರದಲ್ಲಿ ತೊಡಗಿಕೊಂಡೆ.

**2**

ಹೌದು. ವ್ಯಕ್ತಿಯ ಬದುಕಿನಲ್ಲಿ ಅಭಿರುಚಿಗಳು ರೂಪುಗೊಳ್ಳುವುದು ಬಾಲ್ಯದಿಂದಲೇ. ನಾನು ಆರನೇ ತರಗತಿಯಲ್ಲಿ ಇದ್ದಾಗ ಕನ್ನಡ ಅಧ್ಯಾಪಕರಾಗಿ ಮಹಾಬಲೇಶ್ವರ ಸರ್ ವರ್ಗಾವಣೆಗೊಂಡು ನಮ್ಮ ಶಾಲೆಗೆ ಬಂದರು. ಅವರ ಕನ್ನಡ ಭಾಷೆ ಅತಿ ಸುಂದರವಾಗಿತ್ತು. ಹೊಸ ಹೊಸ ಪದಗಳನ್ನು ಬಳಸುವಾಗ ರೋಮಾಂಚನ ಆಯ್ತು. ಪ್ರಬಂಧಗಳನ್ನು ಬರೆಯಲು ಕೊಟ್ಟು ಅವಕ್ಕೆ ಮಾರ್ಕ್ ಕೊಡುತ್ತಿದ್ದರು. ಅಪ್ಪನಲ್ಲಿ, ಅಜ್ಜಿಯಲ್ಲಿ ಕೇಳಿ ಹೊಸ ಹೊಸ ವಿಷಯಗಳನ್ನು ಪ್ರಬಂಧದಲ್ಲಿ ಸೇರಿಸಿ ಬರೆಯಲು ಬಹಳ ಸಂತೋಷ ಆಗುತ್ತಿತ್ತು. ಭಾಷೆಯ ಕುರಿತಾಗಿ ಹೀಗೆ ಹುಟ್ಟಿದ ಪ್ರೀತಿ ಸಾಹಿತ್ಯದ ಆಸಕ್ತಿಗೆ ಕಾರಣವಾಯಿತು. ನಾನು ಅಧ್ಯಾಪಕನಾದಾಗ ನಾನೂ ನನ್ನ ವಿದ್ಯಾರ್ಥಿಗಳಲ್ಲಿ ಅದೇ ಬಗೆಯ ಆಸಕ್ತಿ ಮೂಡಿಸುವ ಮೂಲಕ ಗುರು ಋಣ, ಸಮಾಜ ಋಣ ತೀರಿಸಬಹುದೇ ಎಂದು ಆಯಿತು. ಇದಕ್ಕೆ ಮಕ್ಕಳ ಸಾಹಿತ್ಯವೇ ಯಾಕೆಂದರೆ, ನನಗೆ ಮಾತನಾಡಬೇಕಿರುವುದು ಮಕ್ಕಳ ಜೊತೆ. ಅದು ನನಗೆ ಪರಿಚಿತ ಪ್ರಪಂಚ. ಮಕ್ಕಳ ಸಾಹಿತ್ಯ, ಲೇಖಕನನ್ನು ಮಗುವಾಗಿಯೇ ಉಳಿಸುತ್ತದೆ. ಮಗುವಾಗಿಯೇ ಉಳಿಯುವ ಆಸೆ ಯಾರಿಗಿಲ್ಲ ಹೇಳಿ!

**3**

ಕಥೆ, ಕವಿತೆ ಹಚ್ಚಿಕೊಂಡ ಮಕ್ಕಳ ಸಂಖ್ಯೆ ಕಡಿಮೆ ಎನ್ನುವುದಕ್ಕಿಂತ ಅವನ್ನು ಹಚ್ಚಿಕೊಂಡ ಪೋಷಕರು, ಅಧ್ಯಾಪಕರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದು ಆತಂಕಕಾರಿ.

ಕನ್ನಡ ನಾಡಿನ ಕನ್ನಡ, ಇಂಗ್ಲಿಷ್ ಬೋಧನೆ



ಬಂಟ್ವಾಳ ತಾಲ್ಲೂಕಿನ ವಾಮಪದವಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ರಾಧೇಶ ತೋಳ್ಪಾಡಿ, ಮಕ್ಕಳಿಗಾಗಿ ಬರೆಯುತ್ತಿರುವ ಕನ್ನಡದ ಪ್ರಮುಖ ಕವಿಗಳಲ್ಲೊಬ್ಬರು. 'ಬಿಸಿಲಿನ ದೊರೆಗೆ ನೆರಳಿನ ಮನೆ', 'ಹಲೋ ಹಲೋ ಚಂದಮಾಮ', 'ತುಂಟ ಗಾಳಿ ಕೈಯಲ್' ಮತ್ತು 'ರೈಲು ರೈಲು ಅಲಸಂಡೆ' ಅವರು ಮಕ್ಕಳಿಗಾಗಿ ಬರೆದಿರುವ ಕವನಸಂಕಲನಗಳು. 'ಲಂಕೆಯ ರಕ್ಕಸ ಪಿಳ್ಳೆಗಳು' ಮಕ್ಕಳ ನಾಟಕ. 'ನವಿಲ ಕರುಣೆ' ಇತ್ತೀಚೆಗೆ ಪ್ರಕಟಗೊಂಡ ಎಳೆಯರ ಕಾದಂಬರಿ. ಪ್ರಜಾವಾಣಿ ದೀಪಾವಳಿ ಮಕ್ಕಳ ಕಾವ್ಯಸ್ಪರ್ಧೆ, ನಾ. ಡಿಸೋಜ ಪುಸ್ತಕ ಬಹುಮಾನ ಮತ್ತು ಸಿಸು ಸಂಗಮೇಶ ದತ್ತಿನಿಧಿ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ರಾಧೇಶರು ಪಾತ್ರರಾಗಿದ್ದಾರೆ.